O.S. ನಂಬರಃ 79/2024

ಪಿ. ಡಬ್ಲ್ಯೂಃ 1

ದಿಃ 01-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ ವಾದಿ ಪರ ವಕೀಲರಾದ ಶ್ರೀ ಜಿ.ಎನ್.ಎನ್ ಇವರಿಂದಃ

ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸುತ್ತಿದ್ದು, ಪ್ರಮಾಣ ಪತ್ರದಲ್ಲಿರುವ ಎಲ್ಲ ಅಂಶಗಳು ಸರಿಯಾಗಿದ್ದು, ನನಗೆ ಅದರ ಮಾಹಿತಿ ಇದ್ದು ತಿಳಿದು, ಸಹಿಯನ್ನು ಹಾಕಿರುತ್ತೇನೆ.

ಕ್ರಯದಸ್ತಿನ ಮೂಲ ಪ್ರತಿಯನ್ನು ನಿಪಿ-1, ಅಧಿಕೃತ ಜ್ಞಾಪನದ ದೃಢೀಕೃತ ಪ್ರತಿಯನ್ನು ನಿಪಿ-2, ದಾವಾ ಆಸ್ತಿಗೆ ಸಂಬಂಧಪಟ್ಟ ಪಹಣಿ ಪತ್ರಿಕೆಯನ್ನು ನಿಪಿ-3, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯವರು ನೀಡಿದ ಅನುಮೋದನೆಯ ದೃಢೀಕೃತ ಪ್ರತಿಯನ್ನು ನಿಪಿ-4, ಕಲ 80 ಸಿ ಪಿ ಸಿ ಅಡಿಯಲ್ಲಿ ನೀಡಿದ ನೋಟಿಸಿನ ಕಚೇರಿ ಪ್ರತಿಯನ್ನು ನಿಪಿ-5, 3-ಅಂಚೆ ರಶೀದಿಗಳನ್ನು ನಿಪಿ-6 ರಿಂದ 8, ಟಿ ಎಂ ಸಿ ಅಂಕೋಲಾ ಇವರ ನೀಡಿದ 2-ಹಿಂಬರಹಗಳನ್ನು ನಿಪಿ-9 ಮತ್ತು 10, ಸಿ ಎಲ್ ಎಸ್ ಸಿ ಅಂಕೋಲಾ ಇವರು ನೀಡಿದ ನೇಮಕಾತಿ ಬಗ್ಗೆ ದೃಢೀಕೃತ ಪ್ರತಿಯನ್ನು ನಿಪಿ-11, ನೋಟೀಸು ಜಾರಿಯಾದ ಬಗ್ಗೆ ಹಾಜರುಪಡಿಸಿದ 2-ವರದಿಗಳ ಪ್ರತಿಗಳನ್ನು ನಿಪಿ-12 ಮತ್ತು 13, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯವರು ಕಳುಹಿಸಿದ ಉತ್ತದರ ದೃಢೀಕೃತ ಪ್ರತಿಯನ್ನು ನಿಪಿ-14 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಯನ್ನು ವಕೀಲರ ವಿನಂತಿ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

C/C. ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಅಂಕೋಲಾ.